ದಿನಾಂಕಃ 03-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು**: 26** ನೇ ಪ್ರತಿವಾದಿ ಪರ ಶ್ರೀ ಡಿಎಂಜೆ ವಕೀಲರಿಂದ**:**</u>

ವಾದಿ ನನ್ನ ಗಂಡ ಎಂದರೆ ಸರಿ. ನಾನು ಮತ್ತು ನನ್ನ ಗಂಡ ಕೂಡಿಯೇ ವಾಸ ಇರುತ್ತೇವೆ. ಈ ಪ್ರಕರಣವನ್ನು ನಾನು ಮತ್ತು ನನ್ನ ಗಂಡ ಕೂಡಿಕೊಂಡು ಹಾಕಿರುತ್ತೇವೆ ಎಂದರೆ ಸರಿ. ನನ್ನ ಅಜ್ಜ ಮಲ್ಲಪ್ಪ ಮಗದುಮ ಇವರಿಗೆ 42 ಎಕರೆ ಜಮೀನು ಇತ್ತು. ಅಲ್ಲದೆ ಎರಡು ಮನೆಗಳು ಮತ್ತು ಒಂದು ಖುಲ್ಲಾ ಜಾಗೆ ಇತ್ತು. ನನ್ನ ಅಜ್ಜ ಮೊದಲು ಜಮಖಂಡಿಯ ಮಹಾರಾಜರ ಆಧೀನದಲ್ಲಿ ಕೆಲಸ ಮಾಡುತ್ತಿದ್ದ, ನಂತರ ಒಕ್ಕಲುತನ ಕೆಲಸ ಮಾಡಿರುತ್ತಾನೆ. ನನ್ನ ತಂದೆ ಗುರುಪಾದಪ್ಪ ಕಾರ್ಮಿಕ ನಿರೀಕ್ಷಕನಾಗಿ ಕೆಲಸ ಮಾಡಿರುತ್ತಾರೆ. ನನ್ನ ತಾಯಿಯ ಹೆಸರು ಸೋನವ್ವ. ಸದರಿ ಸೋನವ್ವ ಇವರಿಗೆ ಒಟ್ಟು 5 ಜನ ಮಕ್ಕಳು, ಅವರೆಂದರೆ, ಅಶೋಕ, ನಾನು, ಕಮಲವ್ವ, ರಾಜು ಮತ್ತು ರವಿ. ನನ್ನ ತಾಯಿ ಸೋನವ್ವ ನನ್ನ ತಂದೆಗೆ 3 ನೇ ಹೆಂಡತಿ ಎಂದರೆ ಸರಿ. ಮೊದಲನೆಯ ಹೆಂಡತಿ ಹೆಸರು ಸಿದ್ದವ್ವ ಮತ್ತು 2 ನೇ ಹೆಂಡತಿ ಹೆಸರು ಶಾಂತವ್ವ. ಸಿದ್ದವ್ವ ಇವರಿಗೆ ಇಬ್ಬರು ಮಕ್ಕಳು, ಅವರೆಂದರೆ 26 ನೇ ಪ್ರತಿವಾದಿ ಮತ್ತು ಒಬ್ಬ ಶಿವಪ್ಪ ಎಂದರೆ ಸರಿ. 26 ನೇ ಪ್ರತಿವಾದಿಯ ತಾಯಿ ಸಿದ್ದವ್ವ, ನನ್ನ ಅಜ್ಜಿ ಹನಮವ್ವಳ ಮಗಳು ಎಂದರೆ ಸರಿ. 26 ನೇ ಪ್ರತಿವಾದಿ, ಸದರಿ ಸಿದ್ದವ್ವಳ ಮಗ ಇರುವುದರಿಂದ 26 ನೇ ಪ್ರತಿವಾದಿಗೆ ದಾವಾ ಆಸ್ತಿಗಳಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ.

ನನ್ನ ಅಜ್ಜ, ನಮ್ಮ ಪಿತ್ರಾರ್ಜಿತ ಆಸ್ತಿ 6 ಎಕರೆ ಹೊರತುಪಡಿಸಿ ಉಳಿದ ಆಸ್ತಿಗಳನ್ನು ಯಾವ ಸಮಯದಲ್ಲಿ ಯಾರಿಂದ ಹೇಗೆ ಖರೀದಿ ಮಾಡಿರುತ್ತಾರೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ. ದಾವಾ ಆಸ್ತಿಗಳನ್ನು ಖರೀದಿ ಮಾಡಲು ಹಣದ ಮೂಲ ಎಲ್ಲಿಂದ ಬಂದಿರುತ್ತದೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ನನ್ನ ಅಜ್ಜ ಮಲ್ಲಪ್ಪ ಆಸಂಗಿ ಗ್ರಾಮದ ಜಮೀನು ಸರ್ವೆ ನಂ.41/1 ಸಿ ಕ್ಷೇತ್ರ 2 ಎಕರೆ 17 ಗುಂಟೆ 26 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಆಸ್ತಿಗಳ ವಿಷಯವಾಗಿ ಮೂಲ ದಾವೆ ಸಂ.64/2016 ರಲ್ಲಿ ಈಗಾಗಲೇ ನಮ್ಮ ಮಧ್ಯೆ ತೀರ್ಪು ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಮೃತ ರವೀಂದ್ರ ನನ್ನ ಸಹೋದರ. ನನ್ನ ಇನ್ನೊಬ್ಬ ಸಹೋದರ ರಾಜೇಂದ್ರ ಜೀವಂತ ಇರುವ ಬಗ್ಗೆ ನನಗೆ

ಗೊತ್ತಿಲ್ಲ. ನನ್ನ ಸಹೋದರ ಅಶೋಕ, ನನ್ನ ಇತರ ಸಹೋದರರಾದ ರಾಜೇಂದ್ರ, ರವೀಂದ್ರ, ನನ್ನ ತಂದೆ ಗುರುಪಾದ ಮತ್ತು ತಾಯಿ ಸೋನವ್ವ ಇವರ ವಿರುದ್ದ ಜಮಖಂಡಿಯಲ್ಲಿ ದಾವೆ ಸಂ.213/2000 ರಂತೆ ಸಲ್ಲಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಮನೆತನದ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಲ್ಲಿ ಮಾತ್ರ ಪಾಲು ಕೋರಿ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುದುವರೆದು ನನ್ನ ಅಜ್ಜನ ಹೆಬ್ಬಟ್ಟಿನ ಗುರುತು ಪಡೆದು ಆಸ್ತಿಗಳನ್ನು ವರ್ಗಾವಣೆ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಇದ್ದೆವು. ಆ ಬಗ್ಗೆ ನಾವು ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ. ಸದರಿ ವಿಷಯದ ಕುರಿತು ನಾನಾಗಲಿ, ನನ್ನ ತಂದೆ-ತಾಯಿಯಾಗಲಿ ಯಾವುದೇ ದಾವೆ ಸಲ್ಲಿಸಿಲ್ಲ. ಆ ಸಮಯದಲ್ಲಿ 26 ನೇ ಪ್ರತಿವಾದಿ ಹಾಜರಿದ್ದರು. ನನ್ನ ಅಜ್ಜನಿಂದ ಹೆಬ್ಬಟ್ಟಿನ ಗುರುತು ಪಡೆದು ಆಸಂಗಿ ಗ್ರಾಮದ 2 ಎಕರೆ, ಯಲ್ಲಟ್ಟಿ ಗ್ರಾಮದ 2 ಎಕರೆ ಮತ್ತು ಬಂಡಿಗಣಿ ಗ್ರಾಮದ 13 ಎಕರೆ ಜಮೀನು ವರ್ಗಾವಣೆ ಮಾಡಿಕೊಂಡಿರುತ್ತಾರೆ. ಆ ಸಮಯದಲ್ಲಿ ಸದರಿ ಆಸ್ತಿಗಳು ನನ್ನ ಅಜ್ಜ ಮಲ್ಲಪ್ಪನ ಹೆಸರಿನಲ್ಲಿದ್ದವು. ಸದರಿ ಜಮೀನಿನ ಪೈಕಿ 2 ಎಕರ ನನ್ನ ಅಜ್ಜನಿಗೆ ಪಿತ್ರಾರ್ಜಿತವಾಗಿ ಬಂದಿದ್ದು, ಇನ್ನುಳಿದ ಕ್ಷೇತ್ರ ನನ್ನ ಅಜ್ಜ ಖರೀದಿ ಮಾಡಿದ್ದು ಇರುತ್ತದೆ. ಯಾವ ವರ್ಷದಲ್ಲಿ ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ.

26 ನೇ ಪ್ರತಿವಾದಿ ಬಿ.ಎ. ಪದವಿಧರ ಎಂದರೆ ನನಗೆ ಗೊತ್ತಿಲ್ಲ. 26 ನೇ ಪ್ರತಿವಾದಿಯ ತಾಯಿ ಮೃತಪಟ್ಟ ನಂತರ ಅವರ ಸೋದರ ಮಾವನವರು ವ್ಯವಹಾರದ ಸಲುವಾಗಿ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. 26 ನೇ ಪ್ರತಿವಾದಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ. 26 ನೇ ಪ್ರತಿವಾದಿ ಟ್ಯೂಷನ ನಡೆಸುತ್ತಿರುವ ವಿಷಯ ನನಗೆ ಗೊತ್ತಿಲ್ಲ. 26 ನೇ ಪ್ರತಿವಾದಿಯ ತಂದೆಯ ಜೀವಿತ ಕಾಲದಲ್ಲಿ ಆಸ್ತಿಯ ವಿಷಯವಾಗ ಅವರ ತಂದೆ ಎಂದೂ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಪೋಲಿಸ ಠಾಣೆಗೆ ಮಾತ್ರ ದೂರು ನೀಡಿದ್ದರು, 26 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ಆಸ್ತಿಗಳಲ್ಲಿ ಪಾಲು ಇದೆ ಎಂದು ರಾಜೇಂದ್ರ, ರವೀಂದ್ರ ಮತ್ತು ಅಶೋಕ ಹಾಗೂ ನನ್ನ ತಂದೆ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿರುವುದಿಲ್ಲ. 26 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿ ಇರುವುದರಿಂದ ಸದರಿ ರಾಜೇಂದ್ರ, ರವೀಂದ್ರ, ಅಶೋಕ ಮತ್ತು

ನನ್ನ ತಂದೆ ಯಾವುದೇ ತಕರಾರು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. 26 ನೇ ಪ್ರತಿವಾದಿಯ ಹೆಸರಿನಲ್ಲಿರುವ ಆಸ್ತಿಗಳ ಮೇಲೆ ನಮಗೆ ಯಾವುದೇ ಹಕ್ಕು ವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. 26 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ಹೆಸರಿನಲ್ಲಿರುವ ಆಸ್ತಿಗಳನ್ನು ಸೇರಿಸಿ ಸುಳ್ಳು ದಾವೆ ಸಲ್ಲಿಸಿದ್ದರು, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು:

ಶ್ರೀ ಬಿಎಂಎ ವಕೀಲರು ಹಾಜರಿದ್ದು, ಪಕ್ಷಗಾರರು ತಮ್ಮಿಂದ ವಕಲಾತ ಮರಳಿ ಪಡೆದಿರುವುದಾಗಿ ಹೇಳುತ್ತಾರೆ. ಶ್ರೀ ಎಸ್.ಎ.ಎಸ್. ವಕೀಲರು ಹಾಜರಿದ್ದು, 27 ನೇ ಪ್ರತಿವಾದಿಯ ಪರವಾಗಿ ವಕಾಲತ ಸಲ್ಲಿಸಿದ್ದು , ಆದರೆ ಅವರೂ ಸಹ ತಮ್ಮಿಂದ ವಕಲಾತ ಹಿಂಪಡೆದಿರುವುದಾಗಿ ಹೇಳುತ್ತಾರೆ. 27 ನೇ ಪ್ರತಿವಾದಿಯನ್ನು ಕೂಗಿಸಲಾಯಿತು, ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲು: ವಾದಿ ಪರ ಶ್ರೀ ವಿಡಿಪಿ ವಕೀಲರಿಂದ:

ಮಲ್ಲಪ್ಪ ತಂದೆ ಶಿವಪ್ಪ ಮಗದುಮ ನನ್ನ ಅಜ್ಜ. ನನ್ನ ಅಜ್ಜ 1988 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ಅಜ್ಜನಿಗೆ ಒಟ್ಟು ಇಬ್ಬರು ಮಕ್ಕಳು, ಅವರೆಂದರೆ ಹನಮವ್ವ ಮತ್ತು ಗುರುಪಾದ. ಹನಮವ್ವ ಇವರನ್ನು ಅಥಣಿ ತಾಲೂಕಿನ ದೇವರಾನಟ್ಟಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ. ಸದರಿ ಹನಮವ್ವ ಮೃತಪಟ್ಟಿರುತ್ತಾರೆ. ಸದರಿ ಹನಮವ್ವ ಇವರಿಗೆ ಒಟ್ಟು 9 ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ಗುರುಪಾದಪ್ಪ ಎಂದರೆ ನನ್ನ ತಂದೆ. ನನ್ನ ತಂದೆ ಜೀವಂತ ಇದ್ದಾರೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಮೂಲತಃ ನನ್ನ ಅಜ್ಜ ಮಲ್ಲಪ್ಪ ಶಿವಪ್ಪ ಮಗದುಮ ಇವರಿಗೆ ಸೇರಿದ ಆಸ್ತಿಗಳು. ನನ್ನ ಅಜ್ಜನ ಜೀವಿತ ಕಾಲದಲ್ಲಿ ಅವರ ಮಕ್ಕಳಾದ ಹನಮವ್ವ ಮತ್ತು ಗುರುಪಾದಪ್ಪ ಇವರ ಮಧ್ಯೆ ಆಸ್ತಿಗಳಲ್ಲಿ ಯಾವುದೇ ಪಾಲು ವಾಟ್ನಿ ಆಗಿಲ್ಲ. ಅವರು ಮೃತಪಟ್ಟ ನಂತರ ಅವರ ಮಕ್ಕಳ ಮಧ್ಯೆಯೂ ಸಹ ಯಾವುದೇ ಪಾಲು ವಾಟ್ನಿ ಆಗಿಲ್ಲ. ಸದರಿ ಹನಮವ್ವಳ ಮಕ್ಕಳು ಮತ್ತು ನಾವು ಕೂಡಿಯೇ ಇರುತ್ತೇವೆ.

<u>ಮರು ವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2026.03.03 17:05:57 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ